e-fresh.
Authorised Distributors:
Glamour Enterprises, Mangalore
Mob: 9980495313
Avin Enterprises, Mangalore
Ph: 0824 2441956
Sri Mookambika Enterprises, Udupi
Mob: 9686415649

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಗುಲ್ಬರ್ಗಾ । ದಾವಣಗೆರೆ । ಮುಂಬಯಿ
udayavani.com UDAYAVANI – KANNADA DAILY – MANIPAL ಮಣಿಪಾಲ, ಮಂಗಳವಾರ, ಸೆಪ್ಟಂಬರ್ 23, 2014 ಬೆಲೆ: ₹ 4-00 ವಿದೇಶ ಬೆಲೆ: ₹ 5-00

ಪ್ರಾಜೆಕ್ಟ್ ಸ್ಪರ್ಧೆ: ಸಹ್ಯಾದ್ರಿ ವಿದ್ಯಾರ್ಥಿಗಳಿಗೆ ಬಹುಮಾನ

ಮಂಗಳೂರು, ಸೆ. 22: ಕೊಡಗು, ದ.ಕನ್ನಡ ಮತ್ತು ಉಡುಪಿ ಎಂಜಿನಿಯರ್ಸ್ ಅಸೋಸಿಯೇಶನ್ ಮತ್ತು ಇನ್‌ಸ್ಟಿಟ್ಯೂಶನ್ ಆಫ್ ಎಂಜಿನಿಯರ್ಸ್ ಮಂಗಳೂರು ಘಟಕದ ವತಿಯಿಂದ ನಡೆದ 'ಡು ಇಟ್ ಯುವರ್‌ಸೆಲ್ಫ್' ಪ್ರಾಜೆಕ್ಟ್ ಸ್ಪರ್ಧೆಯಲ್ಲಿ ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಮೂರು ಬಹುಮಾನ ಗಳಿಸಿದೆ.

ಫಾದಿಲ್ ಲಕ್‌ಮನ್, ಮೊಹಮ್ಮದ್ ಅನ್ವರ್, ಫಾತಿಮಾ ಹೀಬಾ, ಆಲ್ವಿನ್ ವಿ. ಎಸ್., ಪ್ರೊಬಿದ್ ಜೆ. ಪನಿಕ್ಕನ್, ಅರುನ್ ಸೈಮನ್ ಅವರು 'ಏರಿಯಲ್ ಮಾನಿಟರ್' ಮತ್ತು ಸೋನಾ ಕೃಷ್ಣನ್ ಆಟೋನಾಮಸ್ ಗ್ರೌಂಡ್ ವೆಹಿಕಲ್ ಪ್ರಾಜೆಕ್ಟ್ ತಯಾರಿಸಿದ್ದರು.

ವಿಲ್ಮಾ ವೀಣಾ ಮತ್ತು ನೈದಿಲ್ ಅವರು ಪ್ರಾಜೆಕ್ಟ್ ಆ್ಯಂಡ್ ಫಂಡಿಂಗ್ ವಿಭಾಗ ಮುಖ್ಯಸ್ಥ ಪ್ರೊ। ಅಬ್ದುಲ್ ಕರೀಂ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪ್ರಾಜೆಕ್ಟ್‌ಗೆ ಕ್ರಮವಾಗಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದುಕೊಂಡಿದ್ದಾರೆ. ಸಿವಿಲ್ ಎಂಜಿನಿಯರಿಂಗ್ ವಿಭಾಗದ ರಶ್ಮಿಶ್ರೀ ಅವರ ಮಾರ್ಗದರ್ಶನದಲ್ಲಿ ಶೆಲ್ವನ್ ರೈನರ್ ಪಿಂಟೊ, ಅಭಿಷೇಕ್ ನಾಯಕ್, ಅಬಿತ್ ಜಿ. ಮತ್ತು ರೆನಿಟಾ ಡಿಸೋಜ ಅವರು ಸಿದ್ಧಪಡಿಸಿದ 'ಡಿಟರ್ಮಿನೇಶನ್ ಆಫ್ ಎಫೀಶಿಯೆನ್ಸಿ ಆಫ್ ಎಕ್ಸಿಸ್ಟಿಂಗ್ ಪ್ಲಾಂಟ್ ಆ್ಯಂಡ್ ಪ್ರೊಪೋಸಿಂಗ್ ಎ ನ್ಯೂ ಸೇವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಫಾರ್ ಸಹ್ಯಾದ್ರಿ ಕ್ಯಾಂಪಸ್' ಪ್ರಾಜೆಕ್ಟ್‌ಗೆ ತೃತೀಯ ಬಹುಮಾನ ಲಭಿಸಿದೆ.